# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ.192/2022

P.W : 3
C.W: 3

**ದಿನಾಂಕ 25.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ಮಲ್ಲಯ್ಯ

**ತಂದೆಯ ಹೆಸರು** : ನಾಗಪ್ಪ

**ವಯಸ್ಸು** : 23 ವರ್ಷ

**ವೃತ್ತಿ** : ಟ್ರಾಕ್ಟರಿ ಚಾಲಕ

**ವಾಸಸ್ಥಳ** : ಹಾಲಿ ವಾಸ ಬೆಂಗಳೂರು
ಖಾಯಂ ವಾಸ (ಕುರುಡಿ ಹಳ್ಳಿ, ಮಾನ್ವಿ ತಾಲ್ಲೂಕು,
ರಾಯಚೂರು ಜಿಲ್ಲೆ

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

**1 ಮತ್ತು 2 ನೇ ಆರೋಪಿಗಳನ್ನು ವಿಸಿ ಮೂಲಕ ಹಾಜರುಪಡಿಸಿದ್ದು ನ್ಯಾಯಾಲಯದ ಕಾರ್ಯ ಕಲಾಪಗಳು ಆಡಿಯೋ ಮತ್ತು ವಿಡಿಯೋ ಮೂಲಕ ಕೇಳಿಸುತ್ತಿರುವ ಮತ್ತು ಕಾಣಿಸುತ್ತಿರುವ ಬಗ್ಗೆ ದೃಡಪಡಿಸಿಕೊಂಡು ಸಾಕ್ಷಿ ವಿಚಾರಣೆ ಪ್ರಾರಂಬಿಸಲಾಯಿತು.**

1. ಮೃತ ದೊಡ್ಡಲಿಂಗಪ್ಪ ಮತ್ತು ಆತನ ಪತ್ನಿ ಚಾ.ಸಾ.1 ಗೊತ್ತು. ಚಾ.ಸಾ.2 ಮಂಜುನಾಥ ಗೊತ್ತು. 5 ವರ್ಷದ ಹಿಂದೆ ತುಮಕೂರಿಗೆ ದುಡಿಯಲು ಬಂದಿದ್ದೆನು. 4 ರಿಂದ 4 - 1/2 ವರ್ಷ ನಾನು

ತುಮಕೂರಿನಲ್ಲಿ ಗಾರೆ ಕೆಲಸ ಮಾಡುತ್ತಿದ್ದೆನು. ನಾನು ಚಾ.ಸಾ.1 ಮತ್ತು 2 ಮತ್ತು ಮೃತ ದೊಡ್ಡಲಿಂಗಪ್ಪ ಎಲ್ಲರೂ ಒಟ್ಟಿಗೆ ಕೂಲಿ ಕೆಲಸಕ್ಕಾಗಿ ಬಂದಿದ್ದೆವು. 7-8 ಜನ ಕೂಲಿ ಕೆಲಸಕ್ಕಾಗಿ ನಮ್ಮ ಊರಿನಿಂದ ಬಂದಿದ್ದೆವು. ಶೆಟ್ಟಿ ಹಳ್ಳಿ ಗೇಟ್ ಬಳಿ ಬಡ್ಡಿ ಹಳ್ಳಿಯಲ್ಲಿ ನಾವೆಲ್ಲರೂ ಟಾರ್ಪಲ್ ಗುಡಿಸಲಿನಲ್ಲಿ ವಾಸವಾಗಿದ್ದೆವು. ಮೃತ ದೊಡ್ಡಲಿಂಗಪ್ಪ ಗೋಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು. ಆತ ಗುಡಿಸಲು ಇದ್ದ ಸ್ಥಳದಿಂದ ಗೋ ಶಾಲೆಗೆ ಬೈಕ್ ನಲ್ಲಿ ಹೋಗುತ್ತಿದ್ದರು.

2. 3-4 ವರ್ಷದ ಹಿಂದೆ ಮೃತ ದೊಡ್ಡ ಲಿಂಗಪ್ಪ ಸಂಜೆ 6.30 ಗಂಟೆಯ ಸಮಯದಲ್ಲಿ ಹಾಲು ತರಲು ಬೈಕ್ ನಲ್ಲಿ ಹೋಗಿದ್ದರು. ಚಾ.ಸಾ.1 ರಾತ್ರಿ 11.00 ರಿಂದ 11.30 ರವರೆಗೂ ದೊಡ್ಡಲಿಂಗಪ್ಪ ಬರತ್ತಾರೆ ಎಂದು ಕಾಯುತ್ತಿದ್ದರು ಆದರೆ ಆತ ಬರದೇ ಇದ್ದ ಕಾರಣ ಚಾ.ಸಾ.1 ನನ್ನ ಬಳಿ ಬಂದು ದೊಡ್ಡಲಿಂಗಪ್ಪ ಬಂದಿಲ್ಲ ಎಂದು ತಿಳಿಸಿದರು. ನಂತರ ನಾನು, ಚಾ.ಸಾ.2 ನಮ್ಮ ಊರು ಕುರುಡಿ ಗ್ರಾಮಕ್ಕೆ ಫೋನ್ ಮಾಡಿ ವಿಚಾರಿಸಿದಾಗ ಆತ ಬಂದಿಲ್ಲ ಎಂದು ತಿಳಿಸಿದರು. ನಂತರ ಒಂದು ವಾರ ಆತ ಬರಬಹುದು ಎಂದು ಕಾಯುತ್ತಿದ್ದೆವು.

3. ಒಂದು ವಾರದ ನಂತರ ಚಾ.ಸಾ.1 ಯಲ್ಲಮ್ಮ ಆಕೆಯ ಗಂಡ ಕಾಣೆಯಾದ ಬಗ್ಗೆ ಜಯನಗರ ಪೋಲೀಸ್ ಠಾಣೆಗೆ ದೂರು ಕೊಟ್ಟರು. ದೂರು ಕೊಟ್ಟ ನಂತರ ಪೋಲೀಸರು ಚಾ.ಸಾ.1 ರವರ ಗುಡಿಸಲಿನ ಬಳಿಗೆ

ಬಂದಿದ್ದರು ಮತ್ತು ಸ್ಥಳದಲ್ಲಿ ಪರಿಶೀಲನೆ ಮಾಡಿದರು. ಸ್ಥಳದಲ್ಲಿ ಒಂದು ದಾಖಲಾತಿಗೆ ನನ ಸಹಿ ಪಡೆದಿದ್ದರು. ಸಾಕ್ಷಿ ಮಹಜರ್ ನಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು ಮಹಜರ್ ಈಗಾಗಲೇ ನಿ.ಪಿ.3 ಎಂದು ಗುರುತಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತು ಮಾಡಲಾಯಿತು.

4. ದೊಡ್ಡಲಿಂಗಪ್ಪ ಕಾಣೆಯಾದ 45 ದಿನಗಳ ನಂತರ ಆತ ಕೊಲೆಯಾಗಿರುತ್ತದೆ ನಮಗೆ ತಿಳಿದು ಬಂತು. 1 ಮತ್ತು 2 ನೇ ಆರೋಪಿಗಳಾದ ವೆಂಕಟೇಶ ಮತ್ತು ಲಕ್ಷ್ಮಿ ದೊಡ್ಡಲಿಂಗಪ್ಪರವರ ಕೊಲೆ ಮಾಡಿರುತ್ತಾರೆ ಎಂದು ತಿಳಿದು ಬಂತು. ತುಮಕೂರಿನ ರೈಲ್ವೆಗೇಟ್ ನ ಬಳಿ ಕೊಲೆಯಾಗಿರುತ್ತದೆ ಎಂದು ತಿಳಿಯಿತು. 2 ನೇ ಆರೋಪಿ ಕಲ್ಲನ್ನು ದೊಡ್ಡಲಿಂಗಪ್ಪರವರ ತಲೆಯ ಮೇಲೆ ಎತ್ತಿ ಹಾಕಿ ಕೊಲೆ ಮಾಡಿರುತ್ತಾರೆ ಎಂದು ತಿಳಿದು ಬಂತು. 1 ಮತ್ತು 2 ನೇ ಆರೋಪಿಗಳಿಬ್ಬರೂ ಸ್ನೇಹಿತರಾಗಿದ್ದು ಅವರಿಬ್ಬರಿಗೂ ದೈಹಿಕ ಸಂಪರ್ಕ ಇತ್ತು ಸದರಿ ವಿಚಾರವನ್ನು ದೊಡ್ಡಲಿಂಗಪ್ಪರವರರಿಗೆ ತಿಳಿದಿದ್ದ ಕಾರಣ ಸದರಿ ವಿಚಾರವನ್ನು ದೊಡ್ಡಲಿಂಗಪ್ಪ ಲಕ್ಷ್ಮಿ 1 ನೇ ಆರೋಪಿಯ ತಂದೆ ತಾಯಿಗೆ ವಿಚಾರ ತಿಳಿಸಿರುತ್ತಾರೆ ಎಂದು ಇಬ್ಬರು ಆರೋಪಿಗಳು ದೊಡ್ಡಲಿಂಗಪ್ಪರವರನ್ನು ಕೊಲೆ ಮಾಡಿದ್ದಾಗಿ ನಂತರ ನನಗೆ ತಿಳಿಯಿತು. 2 ನೇ ಆರೋಪಿ ಸಹಾ ನಮ್ಮ ಊರಿನ ಹತ್ತಿರದ ಸಂಗಾಪುರದ ವಾಸಿ. ಆತ

ಸಹಾ ಗಾರೆ ಕೆಲಸಕ್ಕಾಗಿ ತುಮಕೂರಿಗೆ ಬಂದಿದ್ದನು. ಸಾಕ್ಷಿ ವಿಸಿ ಮೂಲಕ ಹಾಜರುಪಡಿಸಿದ 2 ನೇ ಅರೋಪಿ ವೆಂಕಟೇಶ ರವರನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿಯ ಸ್ನೇಹಿತೆಯಾಗಿದ್ದ ಲಕ್ಷ್ಮಿಯನ್ನು ನೋಡಿದರೆ ಗುರುತಿಸಬಲ್ಲೆ ಸಾಕ್ಷಿ 1 ನೇ ಆರೋಪಿಯನ್ನು ವಿಸಿ ಮೂಲಕ ನೋಡಿ ಗುರುತಿಸಿರುತ್ತಾರೆ. ಈ ಎಲ್ಲಾ ವಿಚಾರಗಳನ್ನು ನಾನು ಪೋಲೀಸ ಮುಂದೆ ಹೇಳಿದ್ದೇನೆ.

**ಪಾಟೀ ಸವಾಲು ಆರೋಪಿಗಳ ಪರ ಶ್ರೀ . ಸಿಡಿಸಿ ವಕೀಲರಿಂದ**

5. 60 ಗುಡಿಸಲುಗಳು ಇತ್ತು. 60 ಗುಡಿಸಲಿನಲ್ಲಿ ವಾಸ ಮಾಡುತ್ತಿದ್ದವರು ಯಾವ ಸ್ಥಳಗಳಿಗೆ ಏನು ಕೆಲಸಕ್ಕೆ ಹೋಗುತ್ತಿದ್ದರು ನನಗೆ ಗೊತ್ತಿಲ್ಲ. ದೊಡ್ಡಲಿಂಗಪ್ಪರವರ ವ್ಯವಹಾರಗಳು ಮತ್ತು ಅಭ್ಯಾಸ ನನಗೆ ಗೊತ್ತಿಲ್ಲ. ದೊಡ್ಡಲಿಂಗಪ್ಪರವರ ಕೊಲೆಯಾದ ಸ್ಥಳಕ್ಕೆ ನಾನು ಹೋಗಿರಲಿಲ್ಲ. 1 ಮತ್ತು 2 ನೇ ಅರೋಪಿಗಳ ಮಧ್ಯೆ ದೈಹಿಕ ಸಂಬಂದ ಇದ್ದ ಬಗ್ಗೆ ನಮ್ಮ ಗುಡಿಸಲಿನ ಬಳಿ ಮೃತ ದೊಡ್ಡಲಿಂಗಪ್ಪ ಮತ್ತು ಆರೋಪಿಗಳ ಮಧ್ಯೆ ಗಲಾಟೆ ಅಗಿರಲಿಲ್ಲ.

6. ಕಾಣೆಯಾದ ಬಗ್ಗೆ ದೂರು ಕೊಟ್ಟ ನಂತರ ಪೋಲೀಸರು ಗುಡಿಡಲಿನ ಬಳಿ ಬಂದಿರಲಿಲ್ಲ ಮತ್ತು ಮಹಜರ್ ಮಾಡಿರಲಿಲ್ಲ ನಾನು ಪೋಲೀಸ್ ಠಾಣೆಯಲ್ಲಿ ಮಹಜರ್ ಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಯಾವ ದಿನಾಂಕ ತಿಂಗಳು ನಾನು ಪೋಲೀಸರ ಮುಂದೆ ಹೇಳಿಕೆ

ಕೊಟ್ಟಿದ್ದೆ ನನಗೆ ನೆನಪಿಲ್ಲ. ನನ್ನ ಹೇಳಿಕೆಯನ್ನು ಯಾರು ಬರವಣಿಗೆ ಮಾಡಿಕೊಂಡಿದ್ದರು ನನಗೆ ಗೊತ್ತಿಲ್ಲ. 1 ಮತ್ತು 2 ನೇ ಅರೋಪಿಗಳ ಮದ್ಯೆ ಇದ್ದ ಅಕ್ರಮ ಸಂಬಂದವನ್ನು ಮೃತ ದೊಡ್ಡಲಿಂಗಪ್ಪ 1 ನೇ ಅರೋಪಿಯ ತಂದೆ ತಾಯಿಗೆ ತಿಳಿಸಿರುತ್ತಾರೆ ಎಂದು ಇಬ್ಬರು ಆರೋಪಿಗಳು ದೊಡ್ಡಲಿಂಗಪ್ಪರವರನ್ನು ಕೊಲೆ ಮಾಡಿದ್ದಾಗಿ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಾನು ಚಾ.ಸಾ.1 ಮತ್ತು ಪೋಲೀಸರ ಮಾತು ಕೇಳಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.